

# ಸುಸ್ವಾಗತ



## ಎಸ್. ಎಸ್. ಎಲ್. ಸಿ. ಪರೀಕ್ಷೆ ಫಲಿತಾಂಶ ಉತ್ತಮೀಕರಣಕ್ಕಾಗಿ




# ವಿದ್ಯಾರ್ಥಿಗಳ ನೆನೆಪಿನ ಪುಸ್ತಕ





# ಪ್ರೀತಿಯ ವಿದ್ಯಾರ್ಥಿಗಳಿಗೆ ಶುಭಾಶಯಗಳು



ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ
ಮಾಡುವ ನೀಡುವ ನಿಜಗುಣವುಳ್ಳವರ
ಕೂಡಿಕೊಂಬ ನಮ್ಮ ಕೂಡಲ ಸಂಗಮದೇವಾ.

– ಭಕ್ತಿ ಭಂಡಾರಿ ಬಸವಣ್ಣನವರು



# ಪ್ರೀತಿಯ ವಿದ್ಯಾರ್ಥಿಗಳಿಗೆ ಶುಭಾಶಯಗಳು



ಈ ಪುಸ್ತಕದಲ್ಲಿರುವ ಅಂಶಗಳನ್ನು ವಿದ್ಯಾರ್ಥಿಗಳು ಪ್ರತಿನಿತ್ಯ ಅಭ್ಯಾಸ ಮಾಡಿದರೆ ಸುಮಾರು 30 ಅಂಕಗಳನ್ನು ಸುಲಭವಾಗಿ ಪಡೆಯಬಹುದು.

| | |
|---|---|
| 1. ಕವಿ ಪರಿಚಯ | 6 ಅಂಕಗಳು |
| 2. ಸಂದರ್ಭ | 4 ಅಂಕಗಳು |
| 3. ಕಂಠಪಾಠ ಪದ್ಯ | 4 ಅಂಕಗಳು |
| 4. ವ್ಯಾಕರಣ | 13 ಅಂಕಗಳು |
| 5. ಅಲಂಕಾರ | 1 ಅಂಕ |
| 6. ಛಂದಸ್ಸು | 1 ಅಂಕ |
| 7. ಗಾದೆ | 1 ಅಂಕ |

# ಎಸ್. ಎಸ್. ಎಲ್. ಸಿ. ಪರೀಕ್ಷೆಯ ನೀಲನಕ್ಷೆ

| ಪರೀಕ್ಷೆ | ಅಂಕಗಳು | ಉತ್ತೀರ್ಣರಾಗಲು ಕನಿಷ್ಠ ಅಂಕಗಳು |
|---|---|---|
| 1. ಬಾಹ್ಯ ಪರೀಕ್ಷೆ (ಬರೆವಣಿಗೆ ಪರೀಕ್ಷೆ) | 100 | 35 / 30 |
| 2. ಆಂತರಿಕ ಪರೀಕ್ಷೆ | 025 | 09 / 08 |
| ಒಟ್ಟು | 125 | 44 / 38 |

# ಎಸ್. ಎಸ್. ಎಲ್. ಸಿ. ಪರೀಕ್ಷೆಯ ನೀಲನಕ್ಷೆ

## ಆಂತರಿಕ ಮೌಲ್ಯಮಾಪನ

| | ಚಟುವಟಿಕೆ – 1 | ಚಟುವಟಿಕೆ – 2 | ಸಾಧನ ಪರೀಕ್ಷೆ | ಒಟ್ಟು |
|---|---|---|---|---|
| ರೂಪಣಾತ್ಮಕ ಮೌಲ್ಯಮಾಪನ 1 | 15 | 15 | 20 | 50 |
| ರೂಪಣಾತ್ಮಕ ಮೌಲ್ಯಮಾಪನ 2 | 15 | 15 | 20 | 50 |
| ರೂಪಣಾತ್ಮಕ ಮೌಲ್ಯಮಾಪನ 3 | 15 | 15 | 20 | 50 |
| ರೂಪಣಾತ್ಮಕ ಮೌಲ್ಯಮಾಪನ 4 | 15 | 15 | 20 | 50 |
| ಒಟ್ಟು | 60 | 60 | 80 | 200 |

# ಮಾದರಿ : ಲೇಖಕರ / ಕವಿ ಪರಿಚಯ

ಶ್ರೀ ______________________ ಅವರು ಕ್ರಿ. ಶ. __________ರಲ್ಲಿ
______________________________ ಗ್ರಾಮದಲ್ಲಿ ಜನಿಸಿದರು.
ಇವರು ____________________________________________
ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.
ಶ್ರೀಯುತರಿಗೆ ________________________________________
ಪ್ರಶಸ್ತಿಯನ್ನು / ಬಿರುದನ್ನು ನೀಡಿ ಗೌರವಿಸಲಾಗಿದೆ.

# ಲೇಖಕರ ಪರಿಚಯ



P. T. Narasimhachar

ಶ್ರೀ ಪು.ತಿ.ನರಸಿಂಹಾಚಾರ್ಯ ಅವರು ಕ್ರಿ. ಶ. 1905 ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು.

ಇವರು ಶಬರಿ, ಅಹಲ್ಯ, ವಿಕಟಕವಿ ವಿಜಯ, ಶ್ರೀಹರಿಚರಿತೆ, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಶ್ರೀಯುತರಿಗೆ ಪಂಪ ಪ್ರಶಸ್ತಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸಿಗಳನ್ನು ನೀಡಿ ಗೌರವಿಸಲಾಗಿದೆ.

# ಕವಿ ಪರಿಚಯ

ಶ್ರೀ ಆದಿ ಮಹಾಕವಿ ಪಂಪ ಅವರು ಕ್ರಿ. ಶ. ಸುಮಾರು 941 ರಲ್ಲಿ ವೆಂಗಿಮಂಡಲದ ವೆಂಗಿಪಳು ಅಗ್ರಹಾರದಲ್ಲಿ ಜನಿಸಿದರು.

ಇವರು ವಿಕ್ರಮಾರ್ಜುನ ವಿಜಯಂ. ಆದಿಪುರಾಣ ಕೃತಿಗಳನ್ನು ರಚಿಸಿದ್ದಾರೆ.

ಶ್ರೀಯುತರಿಗೆ ಸಂಸಾರ ಸಾರೋದಯ, ಸರಸ್ವತೀ ಮಣಿಹಾರ ಹಾಗೂ ಕವಿತಾ ಗುಣಾರ್ಣವ ಎಂಬ ಬಿರುದಗಳನ್ನು ನೀಡಿ ಗೌರವಿಸಲಾಗಿದೆ.

# ಮಾದರಿ :- ಸಂದರ್ಭ

ಈ ವಾಕ್ಯವನ್ನು ಶ್ರೀ ______________________ ಅವರು ರಚಿಸಿರುವ ________________________ ಕೃತಿಯಿಂದ ಆಯ್ದ __________________ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

*******************************************

ಈ ವಾಕ್ಯವನ್ನು ಶ್ರೀ ಪು.ತಿ.ನರಸಿಂಹಾಚಾರ್ಯ ಅವರು ರಚಿಸಿರುವ ಶಬರಿ – ಗೀತನಾಟಕ ಕೃತಿಯಿಂದ ಆಯ್ದ ಶಬರಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ

# ಮಾದರಿ :- ಸಂದರ್ಭ

ಈ ವಾಕ್ಯವನ್ನು ಶ್ರೀ ______________________ ಅವರು ರಚಿಸಿರುವ ________________________ ಕೃತಿಯಿಂದ ಆಯ್ದ _________________ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**************************************

ಈ ವಾಕ್ಯವನ್ನು ಶ್ರೀ ದ.ರಾ.ಬೇಂದ್ರೆ ಅವರು ರಚಿಸಿರುವ ಗರಿ – ಕವನಸಂಕಲನ ಕೃತಿಯಿಂದ ಆಯ್ದ ಹಕ್ಕಿ ಹಾರುತಿದೆ ನೋಡಿದಿರಾ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

# ಶಬರಿ (ಗೀತನಾಟಕ)



P. T. Narasimhachar

- ಪು.ತಿ.ನರಸಿಂಹಾಚಾರ್ಯ
- ಕ್ರಿ. ಶ. 1905
- ಮೇಲುಕೋಟೆ, ಮಂಡ್ಯ ಜಿಲ್ಲೆ.
- ಶಬರಿ, ಅಹಲ್ಯ, ವಿಕಟಕವಿ ವಿಜಯ, ಶ್ರೀಹರಿಚರಿತೆ
- ಪಂಪ ಪ್ರಶಸ್ತಿ
- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



# ಶಬರಿ – (ಗೀತನಾಟಕ)



1. “ಆವುದೀ ಮರುಳು? ನಮ್ಮೆಡೆಗೆ ಬರುತಿಹುದು”
2. “ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ”
3. “ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?”
4. “ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!”
5. “ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು”



# ಅಮೆರಿಕಾದಲ್ಲಿ ಗೊರೂರು (ಪ್ರವಾಸ ಸಾಹಿತ್ಯ)



- ಗೊರೂರು ರಾಮಸ್ವಾಮಿ ಅಯ್ಯಂಗಾರ್
- ಕ್ರಿ. ಶ. 1904
- ಗೊರೂರು, ಹಾಸನ ಜಿಲ್ಲೆ.
- **ಅಮೆರಿಕಾದಲ್ಲಿ ಗೊರೂರು,** ನಮ್ಮ ಊರಿನ ರಸಿಕರು, ಗರುಡಗಂಬದದಾಸಯ್ಯ, ಮೆರವಣಿಗೆ, ಹೇಮಾವತಿ.
- ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್.



# ಅಮೆರಿಕಾದಲ್ಲಿ ಗೊರೂರು (ಪ್ರವಾಸ ಸಾಹಿತ್ಯ)

1. "ನನಗೆ ಇಂಗ್ಲಿಷ್ ಬಂದಿದ್ದರೆ ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿ ಬಿಡುತ್ತಿದ್ದೆ."
2. "ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ."
3. "ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ."
4. "ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ."
5. "ಕೈಯಿಂದ ಇದನ್ನು ಮಾಡುವುದು ಹೇಗೋ."





# ಜೀವನದೃಷ್ಟಿ (ವೈಚಾರಿಕ ಪ್ರಬಂಧ)



- ವಿನಾಯಕ ಕೃಷ್ಣ ಗೋಕಾಕ್
- ಕ್ರಿ.ಶ. 1909
- ಸವಣೂರು, ಹಾವೇರಿ ಜಿಲ್ಲೆ
- ಜೀವನ ಪಾಠಗಳು, ಸಮುದ್ರಗೀತೆಗಳು, ಸಮರಸವೇ ಜೀವನ, ಭಾರತ ಸಿಂಧೂ ರಶ್ಮಿ.
- ಭಾರತೀಯ ಜ್ಞಾನಪೀಠ ಪ್ರಶಸ್ತಿ,
- ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ.



# ಜೀವನದೃಷ್ಟಿ (ವೈಚಾರಿಕ ಪ್ರಬಂಧ)



1. “ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು.”
2. “ತನ್ನ ಗುಂಗಿನಲ್ಲಿದ್ದ ಈ ಅಂತರ್ಜೀವಿಗೆ ಪರರ ಹಂಗೆಲ್ಲಿ.”
3. “ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು.”
4. “ದಾತೃವಿನ ಮನವನ್ನು ಹತ್ತು ಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು.”
5. “ಜೀವನರಥಕ್ಕೆ ಒಗ್ಗಾಲಿಯ ಭೀತಿಯಿದೆ.”



# ಧರ್ಮಸಮದೃಷ್ಟಿ (ಶಾಸನ ಸಾಹಿತ್ಯ)

- ವಿಜಯನಗರ ಸಾಮ್ರಾಜ್ಯದ ಅರಸ ವೀರಬುಕ್ಕರಾಯನಿಗೆ ಸಂಬಂಧಿಸಿದ ಶಾಸನ
- ಕ್ರಿ.ಶ. 1368
- ಕನ್ನಡ ಬಾವುಟ (ಆಕರ ಕೃತಿ)
- ಸಂಪಾದಕರು : ಬಿ.ಎಂ. ಶ್ರೀಕಂಠಯ್ಯ






# ಧರ್ಮಸಮದೃಷ್ಟಿ (ಶಾಸನ ಸಾಹಿತ್ಯ)



1. “ಪಾಷಂಡ ಸಾಗರ ಮಹಾಬಡವಾಮುಖಾಗ್ನಿಃ”
2. “ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು.”
3. “ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಂಗಳಿಗೆ ಸೊದೆಯನಿಕ್ಕುವುದು”
4. “ಈ ಮಾಡಿದ ಕಟ್ಟಳೆಯನು ಆವನೊಬ್ಬನು ಮೀರಿದವನು ರಾಜದ್ರೋಹಿಯಪ್ಪನು”



# ಭಾಗ್ಯಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ (ವ್ಯಕ್ತಿ ಚಿತ್ರ)



- ಡಿ.ಎಸ್. ಜಯಪ್ಪಗೌಡ
- ಕ್ರಿ. ಶ. 1947
- ದಾರದಹಳ್ಳಿ, ಚಿಕ್ಕಮಗಳೂರು ಜಿಲ್ಲೆ
- ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು, ಕರ್ನಾಟಕ ಗ್ರಾಮೀಣ ಸಂಸ್ಥೆಗಳು.
- ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



# ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ (ವ್ಯಕ್ತಿ ಚಿತ್ರ)

1. "ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ".
2. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"
3. "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ"
4. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿ ಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು"
5. "ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ"

# ಎದೆಗೆ ಬಿದ್ದ ಅಕ್ಷರ (ವೈಚಾರಿಕ ಲೇಖನ)




- ದೇವನೂರು ಮಹಾದೇವ
- ಕ್ರಿ. ಶ. 1949
- ದೇವನೂರು, ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ
- ಎದೆಗೆ ಬಿದ್ದ ಅಕ್ಷರ, ಕುಸುಮಬಾಲೆ, ಒಡಲಾಳ, ದ್ಯಾವನೂರು, ಗಾಂಧಿ ಮತ್ತು ಮಾವ್ರೋ, ನಂಬಿಕೆಯ ನಂಟ, ನೋಡು ಮತ್ತು ಕೂಡು.
- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.



# ಎದೆಗೆ ಬಿದ್ದ ಅಕ್ಷರ (ವೈಚಾರಿಕ ಲೇಖನ)

1. "ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?"
2. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"
3. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ"
4. "ನಾವು ಮನುಷ್ಯರು"
5. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ"






# ವೃಕ್ಷಸಾಕ್ಷಿ (ಪಂಚತಂತ್ರ ಕಥೆ)

- ದುರ್ಗಸಿಂಹ
- ಕ್ರಿ. ಶ. ಸುಮಾರು 1031
- ಕಿಸುಕಾಡಿನ ಸಯ್ಯಡಿ
- ಕರ್ಣಾಟಕ ಪಂಚತಂತ್ರಂ



# ವೃಕ್ಷಸಾಕ್ಷಿ (ಪಂಚತಂತ್ರ ಕಥೆ)

1. “ಪೊನ್ನನೆಲ್ಲಮಂ ನೀನೇ ಕೊಂಡೆ”
2. “ಈತನ ಮಾತು ಅಶ್ರುತಪೂರ್ವಮ್”
3. “ನಿನ್ನ ಪಳುವಗೆ ನಮ್ಮ ಕುಲಮನೆಲ್ಲವನಳಿವ ಬಗೆ”
4. “ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ”
5. “ಹುಸಿಯದ ಬೇಹಾರಿಯೇ ಇಲ್ಲ”



# ವ್ಯಾಘ್ರಗೀತೆ (ಲಲಿತ ಪ್ರಬಂಧ)



- ಎ. ಎನ್. ಮೂರ್ತಿರಾವ್
- ಕ್ರಿ. ಶ. 1900
- ಅಕ್ಕಿಹೆಬ್ಬಾಳು, ಕೆ.ಆರ್. ಪೇಟೆ ತಾಲೂಕು, ಮಂಡ್ಯ ಜಿಲ್ಲೆ
- ಸಮಗ್ರ ಲಲಿತ ಪ್ರಬಂಧಗಳು, ಹಗಲುಗನಸುಗಳು, ಅಲೆಯುವ ಮನ, ಅಪರ ವಯಸ್ಕನ ಅಮೆರಿಕಾ ಯಾತ್ರೆ
- ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,



# ವ್ಯಾಘ್ರಗೀತೆ (ಲಲಿತ ಪ್ರಬಂಧ)

1. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿ ರಕ್ತವಿದೆಕೋ"
2. "ಸ್ವಧರ್ಮೇ ನಿಧನಂ ಶ್ರೇಯಃ"
3. ದೇವರ, ಮರ ಹತ್ತುವಷ್ಟು ಅವಕಾಶ ಕರುಣಿಸು"
4. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"
5. "ಹುಲಿ ಈಗ ಎಷ್ಟು ಹಸಿದಿರಬೇಕು."





# 1. ಎಮ್ಮ ನುಡಿಗೇಳ್ (ಹಳಗನ್ನಡ ಕಾವ್ಯ)

- ಆದಿಕವಿ ಪಂಪ
- ಕ್ರಿ. ಶ. ಸುಮಾರು 941
- ವೆಂಗಿಪಳು ಅಗ್ರಹಾರ, ವೆಂಗಿಮಂಡಲ
- ವಿಕ್ರಮಾರ್ಜುನ ವಿಜಯಂ, ಆದಿ ಪುರಾಣ
- ಸರಸ್ವತೀ ಮಣಿಹಾರ, ಸಂಸಾರ ಸಾರೋದಯ,
- ಕವಿತಾ ಗುಣಾರ್ಣವ






# 1. ಎಮ್ಮ ನುಡಿಗೇಳ್ (ಹಳಗನ್ನಡ ಕಾವ್ಯ)

1. “ಎನಗಂ ಪಾಂಡುಗಮಿಲ್ಲ ಭೇದಂ”
2. ಈ ಕಲಹಮುಂ ನಿನ್ನಿಂದಮಾಯ್ತಂದೊಡಿಂ ಮುನಿವೈ”
3. ಪಗೆಗೆ ಕಣಿಯೊಂದುಂಟೇ”
4. “ಪಗೆಯಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ”
5. “ಪಗಲೆನಿತಾನುಂ ದೀವಿಗೆಗಳುರಿದೊಡೇಮ್”
6. “ಪೆರ್ಮರನುಳಿವಂತೆ ನೀನುಳಿದೆ”



# 1. ಎಮ್ಮ ನುಡಿಗೇಳ್ (ಹಳಗನ್ನಡ ಕಾವ್ಯ)



ಪಂಪ

**ಕಂಠಪಾಠ**

ನೀನುಳ್ಳೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ ।
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ॥

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ ।
ರ್ಮರನುಳಿವಂತೆ ನೀನುಳಿದೆಯಿನ್ನಿರಿವರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ॥

# 2. ಹಕ್ಕಿ ಹಾರುತಿದೆ ನೋಡಿದಿರಾ (ಭಾವಗೀತೆ)




- ದತ್ತಾತ್ರೇಯ ರಾಮಚಂದ್ರ ಬೇಂದ್ರೆ
- (ಅಂಬಿಕಾತನಯದತ್ತಾ)
- ಕ್ರಿ. ಶ. 1896
- ಧಾರವಾಡ
- ಗರಿ, ನಾಕುತಂತಿ, ನಾದಲೀಲೆ, ಕೃಷ್ಣಕುಮಾರಿ, ಉಯ್ಯಾಲೆ.
- ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.





# 2. ಹಕ್ಕಿ ಹಾರುತಿದೆ ನೋಡಿದಿರಾ (ಭಾವಗೀತೆ)

1. "ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ"
2. "ಸಾರ್ವಭೌಮರಾ ನೆತ್ತಿಯ ಕುಕ್ಕಿ"
3. "ಮನ್ವಂತರಗಳ ಭಾಗ್ಯವ ತೆರೆಸಿ"
4. "ಹೊಸಗಾಲದ ಹಸುಮಕ್ಕಳ ಹರಸಿ"





# 2. ಹಕ್ಕಿ ಹಾರುತಿದೆ ನೋಡಿದಿರಾ (ಭಾವಗೀತೆ)



**ಕಂಠಪಾಠ**

ನೀಲಮೇಘಮಂಡಲ–ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಯುಗ–ಯುಗಗಳ ಹಣೆಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

# 3. ಹಲಗಲಿ ಬೇಡರು (ಜನಪದ ಲಾವಣಿ)

ಆಕರ ಕೃತಿ

ಡಾ. ಬಿ. ಎಸ್. ಗದ್ದಗಿಮಠ ಅವರ

‘ಕನ್ನಡ ಜನಪದ ಗೀತೆಗಳು’

# 3. ಹಲಗಲಿ ಬೇಡರು (ಜನಪದ ಲಾವಣಿ)

1. ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"
2. "ಜೀವ ಸತ್ತು ಹೋಗುವುದು ಗೊತ್ತ"
3. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"
4. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

# 3. ಹಲಗಲಿ ಬೇಡರು (ಜನಪದ ಲಾವಣಿ)

# 4. ವಚನ ಸೌರಭ




- ಜೇಡರದಾಸಿಮಯ್ಯ
- ರಾಮನಾಥ
- ಕ್ರಿ. ಶ. ಸುಮಾರು 1150.
- ಮುದೇನೂರು, ಯಾದಗಿರಿ ತಾಲ್ಲೋಕ್
- 150 ವಚನಗಳು
- ಫ. ಗು. ಹಳಕಟ್ಟಿ ಅವರು ಸಂಪಾದಿಸಿರುವ 'ದಾಸಿಮಯ್ಯನ ವಚನಗಳು'




Devara Daasimayya - Devanga KulaGuru

# 4. ವಚನ ಸೌರಭ



- ಬಸವಣ್ಣ
- ಕೂಡಲಸಂಗಮದೇವ
- ಕ್ರಿ. ಶ. ಸುಮಾರು 1260
- ಬಾಗೇವಾಡಿ, ಬಿಜಾಪುರ ಜಿಲ್ಲೆ
- ವಚನಗಳು
- ಸಂ. ಶಿ. ಭೂಸನೂರುಮಠ ಅವರು ಸಂಪಾದಿಸಿರುವ 'ವಚನ ಸಾಹಿತ್ಯ ಸಂಗ್ರಹ'



# 4. ವಚನ ಸೌರಭ




1. “ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ”
2. “ಸುಡು! ಸುಡು! ಮನವಿದು ವಿಷಯಕ್ಕೆ ಹರಿಯುವುದು”
3. “ಹಲವು ಕೊಂಬೆಗೆ ಹಾಯುತಲಿದೆ”
4. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು”





# 4. ವಚನ ಸೌರಭ





# 5. ಸಂಕಲ್ಪಗೀತೆ



- ಡಾ. ಜಿ. ಎಸ್. ಶಿವರುದ್ರಪ್ಪ
- ಕ್ರಿ. ಶ. 1926
- ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.
- ಎದೆತುಂಬಿ ಹಾಡಿದೆನು. ಸಾಮಗಾನ, ಚೆಲುವು–ಒಲವು, ದೇವಶಿಲ್ಪಿ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವ ಪಶ್ಚಿಮ, ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ.
- ರಾಷ್ಟ್ರಕವಿ, ನಾಡೋಜ, ಗೌರವ ಡಿ. ಲಿಟ್. ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು

# 5. ಸಂಕಲ್ಪಗೀತೆ



1. “ಪ್ರೀತಿಯ ಹಣತೆಯ ಹಚ್ಚೋಣ”
2. “ಮುಂಗಾರಿನ ಮಳೆಯಾಗೋಣ”
3. “ಹೊಸ ಭರವಸೆಗಳ ಕಟ್ಟೋಣ”
4. “ಹೊಸ ಎಚ್ಚರದೊಳು ಬದುಕೋಣ”



# 5. ಸಂಕಲ್ಪಗೀತೆ



ಕಂಠಪಾಠ

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ–ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

# 6. ಕೌರವೇಂದ್ರನ ಕೊಂದೆ ನೀನು

- ಕುಮಾರ ವ್ಯಾಸ
- ಗದುಗಿನ ನಾರಣಪ್ಪ
- ಕ್ರಿ. ಶ. ಸುಮಾರು 1430
- ಗದಗ ಪ್ರಾಂತ್ಯದ ಕೋಳಿವಾಡ
- ಕರ್ಣಾಟ ಭಾರತ ಕಥಾಮಂಜರಿ
- ರೂಪಕ ಸಾಮ್ರಾಜ್ಯ ಚಕ್ರವರ್ತಿ






# 6. ಕೌರವೇಂದ್ರನ ಕೊಂದೆ ನೀನು



1. “ರವಿಸುತನ ಕಿವಿಯಲಿ ಬಿತ್ತಿದನು ಭಯವ”
2. “ಬಾಯ್ದಂಬುಲಕೆ ಕೈಯಾನುವರೆ”
3. “ಜೀಯ ಹಸಾದವೆಂಬುದು ಕಷ್ಟ”
4. ನಿನ್ನಪದೆಸೆಯ ಬಯಸುವವನಲ್ಲ”
5. “ಮಾರಿಗೌತಣವಾಯ್ತು ನಾಳಿನ ಭಾರತವು”



# 6. ಕೌರವೇಂದ್ರನ ಕೊಂದೆ ನೀನು



## ಕಂಠಪಾಠ

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ||6||



ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಖ್ಮಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ||10||

# 7. ವೀರಲವ




- ಲಕ್ಷ್ಮೀಶ
- ಕ್ರಿ. ಶ. ಸುಮಾರು 1550
- ದೇವನೂರು, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.
- ಜೈಮಿನಿ ಭಾರತ
- ಉಪಮಾಲೋಲ, ಕರ್ನಾಟ ಕವಿ ಚೂತವನ ಚೈತ್ರ



# 7. ವೀರಲವ

1. “ರಘೂದ್ವಹನ ಸೊಲ್ಗೇಳಿ ನಮಿಸಲ್”
2. “ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ”
3. “ಅರಸುಗಳ ವಾಜಿಯಂ ಬಿಡು”
4. “ಜಾನಕಿಯ ಮಗನಿದಕೆ ಬೆದರುವನೆ”






# 7. ವೀರಲವ



# 8. ಸಾರ್ಥಕತೆ



- 1. ಸಂಕಟಕೆ ಗಡಿ ಇಲ್ಲ
- ದುರ್ಗಪ್ಪ ಸರಸ್ವತಿ
- ಕ್ರಿ. ಶ. 1963
- ಬೆಂಗಳೂರು
- ಹೆಣೆದರೆ ಜೇಡನಂತೆ, ಜೀವಸಂಪಿಗೆ, ಈಗೇನ್ಮಾಡೀರಿ

# 8. ಸಾರ್ಥಕತೆ



- 2. ನನ್ನಾಸೆ
- ಇಂದುಮತಿ ಲಮಾಣಿ
- ಕಾಲ : ಕ್ರಿ. ಶ. 1959
- ಸ್ಥಳ : ವಿಜಯಪುರ ಜಿಲ್ಲೆ ಬರಟಗಿಯ ಮೂರನೆಯ ತಾಂಡಾ.
- ಕೃತಿಗಳು : ನನ್ನ ಸುತ್ತಲಿನ ಸತ್ಯಗಳು, ತಾಯೊಲೋಕ, ಭಾವಲೋಕ, ಏಕಾದಶ, ಕೊರಡು ಕೊನರುವುದು ಬರಡು ಹಯನಹುದು.

# 8. ಸಾರ್ಥಕತೆ



1. “ಗೆರ ಎಳೆದು ‘ಗಡಿ’ ಎಂದ”
2. “ಗಡಿಯೂ ಇಲ್ಲ ಆಚೆ ಈಚೆಯೂ ಇಲ್ಲ”
3. “ಪುಣ್ಯವಂತರಿಗೆ ನೆರಳಾಗಬೇಕು”
4. “ದೀನರ ಊರುಗೋಲು ನಾನಾಗಬೇಕು”



# 8. ಸಾರ್ಥಕತೆ

# 1. ಕನ್ನಡ ವರ್ಣಮಾಲೆ (49 ಅಕ್ಷರಗಳು)

1. ಸ್ವರಗಳು – 13 ಅ. ಆ. ಇ. ಈ. ಉ. ಊ. ಋ.
ಎ. ಏ. ಐ. ಒ, ಓ, ಔ.

2. ಹ್ರಸ್ವಸ್ವರಗಳು – 06. ಅ, ಇ, ಉ, ಋ, ಎ, ಒ.

3. ದೀರ್ಘಸ್ವರಗಳು –07. ಆ, ಈ, ಊ, ಏ, ಐ, ಓ, ಔ.

4. ವ್ಯಂಜನಗಳು – 34. ಕ ವರ್ಗ – ಕ್, ಖ್, ಗ್, ಘ್, ಙ್.
ಚ ವರ್ಗ – ಚ್, ಛ್, ಜ್, ಝ್, ಞ್.
ಟ ವರ್ಗ – ಟ್, ಠ್, ಡ್, ಢ್, ಣ್.
ತ ವರ್ಗ – ತ್, ಥ್, ದ್, ಧ್, ನ್.
ಪ ವರ್ಗ – ಪ್, ಫ್, ಬ್, ಭ್, ಮ್.
ಯ್, ರ, ಲ್, ವ್, ಶ್, ಷ್, ಸ್, ಹ್, ಳ್.

# 1. ಕನ್ನಡ ವರ್ಣಮಾಲೆ (49 ಅಕ್ಷರಗಳು)

5. ವರ್ಗೀಯ ವ್ಯಂಜನಗಳು – 25

ಅಲ್ಪಪ್ರಾಣಗಳು – 10. ಕ್. ಗ್, ಚ್. ಜ್, ಟ್,
ಡ್, ತ್, ದ್, ಪ್, ಬ್.

ಮಹಾಪ್ರಾಣಗಳು – 10. ಖ್, ಘ್, ಛ್, ಝ್. ಠ್,
ಢ್, ಥ್, ಧ್, ಫ್, ಭ್.

ಅನುನಾಸಿಕಗಳು – 05. ಙ್, ಞ್, ಣ್, ನ್, ಮ್.

6. ಅವರ್ಗೀಯ ವ್ಯಂಜನಗಳು – 09

ಯ್, ರ್, ಲ್, ವ್, ಶ್, ಷ್, ಸ್, ಹ್, ಳ್.

7. ಯೋಗವಾಹಗಳು – 2,

ಅನುಸ್ವಾರ ‘ಂ’,
ವಿಸರ್ಗ ‘ಃ’

# 2. ನಾಮಪದ

- ಅಂಕಿತನಾಮ :– ಸಹದೇವ, ಧರ್ಮರಾಯ, ರಾಹುಲ, ಕಮಲಾಕ್ಷ.
- ರೂಢನಾಮ :– ನದಿ, ಪರ್ವತ, ಊರು ದೇಶ, ಮನುಷ್ಯ.
- ಅನ್ವರ್ಥನಾಮ :– ವ್ಯಾಪಾರಿ, ವಿಜ್ಞಾನಿ, ವಿದ್ವಾಂಸ, ಪೂಜಾರಿ.
- ಗುಣವಾಚಕ :– ಒಳ್ಳೆಯ, ಕೆಟ್ಟ, ದೊಡ್ಡದು, ಹಳತು.
- ಸಂಖ್ಯಾವಾಚಕ :– ಹನ್ನೆರಡು, ಐವತ್ತು, ಎಂಬತ್ತು.
- ದಿಗ್ವಾಚಕಗಳು :– ಮೂಡಣ, ತೆಂಕಣ, ಪಡುವಣ, ಈಶಾನ್ಯ, ಆಗ್ನೇಯ.
- ಪರಿಮಾಣವಾಚಕಗಳು :– ಅಷ್ಟು, ಎಷ್ಟು, ಹಲವು, ಇನಿತು, ಅನಿತು.
- ಭಾವನಾಮಗಳು :– ಕೆಂಪು, ಹಿರಿಮೆ, ನೋಟ, ಮಾಟ, ಆಟ.

# 3. ಸರ್ವನಾಮಗಳು

- ಪುರುಷಾರ್ಥಕ ಸರ್ವನಾಮಗಳು
- ನಾನು – ನಾವು

  ನೀನು – ನೀವು

  ಅವನು – ಅವರು ಇವನು – ಇವರು

  ಅವಳು – ಅವರು ಇವಳು – ಇವರು

  ಅದು – ಅವು ಇದು – ಇವು

- ಆತ್ಮಾರ್ಥಕ ಸರ್ವನಾಮಗಳು : ತಾನು, ತಾವು, ತನ್ನ, ತಮ್ಮ
- ಪ್ರಶ್ನಾರ್ಥಕ ಸರ್ವನಾಮಗಳು : ಯಾರು?, ಯಾವುದು?, ಏನು?

# 4. ಭೂತಕಾಲ ರೂಪ ಕ್ರಿಯಾಪದಗಳು

| ಕ್ರ. ಸಂ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡಿದೆನು | ಹಾಡಿದೆವು |
| 2 | ಮಧ್ಯಮ ಪುರುಷ | ಹಾಡಿದೆ | ಹಾಡಿದಿರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | <br>ಹಾಡಿದನು<br>ಹಾಡಿದಳು<br>ಹಾಡಿತು | <br>ಹಾಡಿದರು<br>ಹಾಡಿದರು<br>ಹಾಡಿದವು |


¨B RAVEESH KUMAR - 9448958498

# ವರ್ತಮಾನ ಕಾಲ ರೂಪ ಕ್ರಿಯಾಪದಗಳು

| ಕ್ರ. ಸಂ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡುತ್ತೇನೆ | ಹಾಡುತ್ತೇವೆ |
| 2 | ಮಧ್ಯಮ ಪುರುಷ | ಹಾಡುತ್ತೀಯೆ | ಹಾಡುತ್ತೀರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | <br>ಹಾಡುತ್ತಾನೆ<br>ಹಾಡುತ್ತಾಳೆ<br>ಹಾಡುತ್ತದೆ | <br>ಹಾಡುತ್ತಾರೆ<br>ಹಾಡುತ್ತಾರೆ<br>ಹಾಡುತ್ತವೆ |


¨B RAVEESH KUMAR - 9448958498

# ಭವಿಷ್ಯತ್‌ಕಾಲ ರೂಪ ಕ್ರಿಯಾಪದಗಳು

| ಕ್ರ. ಸಂ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡುವೆನು | ಹಾಡುವೆವು |
| 2 | ಮಧ್ಯಮ ಪುರುಷ | ಹಾಡುವೆ | ಹಾಡುವಿರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | <br>ಹಾಡುವನು<br>ಹಾಡುವಳು<br>ಹಾಡುವುದು | <br>ಹಾಡುವರು<br>ಹಾಡುವರು<br>ಹಾಡುವುವು |


¨B RAVEESH KUMAR - 9448958498

# ವಿಧ್ಯರ್ಥಕ ರೂಪ ಕ್ರಿಯಾಪದಗಳು

| ಕ್ರ. ಸಂ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡುವೆ | ಹಾಡೋಣ |
| 2 | ಮಧ್ಯಮ ಪುರುಷ | ಹಾಡು | ಹಾಡಿರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | <br>ಹಾಡಲಿ<br>ಹಾಡಲಿ<br>ಹಾಡಲಿ | <br>ಹಾಡಲಿ<br>ಹಾಡಲಿ<br>ಹಾಡಲಿ |


¨B RAVEESH KUMAR - 9448958498

# ಸಂಭಾವನಾರ್ಥಕ ರೂಪ ಕ್ರಿಯಾಪದಗಳು

| ಕ್ರ. ಸಂ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡೇನು | ಹಾಡೇವು |
| 2 | ಮಧ್ಯಮ ಪುರುಷ | ಹಾಡೀಯೆ | ಹಾಡೀರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | <br>ಹಾಡಿಯಾನು<br>ಹಾಡಿಯಾಳು<br>ಹಾಡೀತು | <br>ಹಾಡಿಯಾರು<br>ಹಾಡಿಯಾಳು<br>ಹಾಡಿಯಾವು |

# ನಿಷೇಧಾರ್ಥಕ ರೂಪ ಕ್ರಿಯಾಪದಗಳು

| ಕ್ರ. ಸಂ. | ಪುರುಷ | ಏಕ ವಚನ | ಬಹು ವಚನ |
|---|---|---|---|
| 1 | ಉತ್ತಮ ಪುರುಷ | ಹಾಡೆನು | ಹಾಡೆವು |
| 2 | ಮಧ್ಯಮ ಪುರುಷ | ಹಾಡೆ | ಹಾಡರಿ |
| 3 | ಪ್ರಥಮ ಪುರುಷ<br>ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | <br>ಹಾಡನು<br>ಹಾಡಳು<br>ಹಾಡದು | <br>ಹಾಡರು<br>ಹಾಡರು<br>ಹಾಡವು |

# 5. ಹೊಸಗನ್ನಡ ವಿಭಕ್ತಿ ಪ್ರತ್ಯಯಗಳು

| ವಿಭಕ್ತಿ | ಹೊಸಗನ್ನಡ ವಿಭಕ್ತಿ ಪ್ರತ್ಯಯ | ಪದರೂಪ | ಕಾರಕಾರ್ಥ |
|---|---|---|---|
| ಪ್ರಥಮ | ಉ | ಸಾವಿತ್ರಿಯು | ಕರ್ತೃ ಕಾರಕ |
| ದ್ವಿತೀಯ | ಅನ್ನು | ಸಾವಿತ್ರಿಯನ್ನು | ಕರ್ಮಕಾರಕ |
| ತೃತೀಯ | ಇಂದ | ಸಾವಿತ್ರಿಯಿಂದ | ಕರಣಕಾರಕ |
| ಚತುರ್ಥಿ | ಗೆ/ಕೆ/ಕ್ಕೆ | ಸಾವಿತ್ರಿಗೆ | ಸಂಪ್ರದಾನಕಾರಕ |
| ಪಂಚಮಿ | ದೆಸೆಯಿಂದ | ಸಾವಿತ್ರಿಯದೆಸೆಯಿಂದ | ಅಪಾದಾನಕಾರಕ |
| ಷಷ್ಠಿ | ಅ | ಸಾವಿತ್ರಿಯ | ಸಂಬಂಧಕಾರಕ |
| ಸಪ್ತಮಿ | ಅಲ್ಲಿ | ಸಾವಿತ್ರಿಯಲ್ಲಿ | ಅಧಿಕರಣಕಾರಕ |

# 5. ಹಳಗನ್ನಡ ವಿಭಕ್ತಿ ಪ್ರತ್ಯಯಗಳು

| ವಿಭಕ್ತಿ | ಹಳಗನ್ನಡ ವಿಭಕ್ತಿ ಪ್ರತ್ಯಯ | ಪದರೂಪ | ಕಾರಕಾರ್ಥ |
| --- | --- | --- | --- |
| ಪ್ರಥಮ | ಮ್ | ಸಾವಿತ್ರಿಂ | ಕರ್ತೃ ಕಾರಕ |
| ದ್ವಿತೀಯ | ಅಮ್ | ಸಾವಿತ್ರಿಯಂ | ಕರ್ಮಕಾರಕ |
| ತೃತೀಯ | ಇಮ್ | ಸಾವಿತ್ರಿಯಿಂ | ಕರಣಕಾರಕ |
| ಚತುರ್ಥಿ | ಗೆ/ಕೆ/ಕ್ಕೆ | ಸಾವಿತ್ರಿಂಗೆ | ಸಂಪ್ರದಾನಕಾರಕ |
| ಪಂಚಮಿ | ಅತ್ತಣಿಂ | ಸಾವಿತ್ರಿಯತ್ತಣಿಂ | ಅಪಾದಾನಕಾರಕ |
| ಷಷ್ಠಿ | ಅ | ಸಾವಿತ್ರಿಯ | ಸಂಬಂಧಕಾರಕ |
| ಸಪ್ತಮಿ | ಒಳ್ | ಸಾವಿತ್ರಿಯೊಳ್ | ಅಧಿಕರಣಕಾರಕ |

# 6. ಕನ್ನಡ ಸಂಧಿಗಳು

ಕನ್ನಡ ಸ್ವರಸಂಧಿಗಳು :– 1. ಲೋಪಸಂಧಿ 2. ಆಗಮಸಂಧಿ

ಕನ್ನಡ ವ್ಯಂಜನ ಸಂಧಿ :– 3. ಆದೇಶ ಸಂಧಿ

## ಲೋಪಸಂಧಿ

| | | |
|---|---|---|
| ಊರೂರು | ಬಲ್ಲೆನೆಂದು | ಮಾತಂತು |
| ಸಂಪನ್ನರಾದ | ಕಾಣಲಾಗದು | ತಪ್ಪಲೀಯದೆ |
| ಬಂದಲ್ಲದೆ | ತಕ್ಕನಿತು | ಪೊಳ್ದಿಡೆ |
| ಇರುಳಳಿದು | ತೆರೆದಿಕ್ಕುವ | ಮನದೊಳಗೆ |
| ಚರಿಸುತದ್ವರದ | ಲೇಖನವನೋದಿ | ನಿಂತಿರ್ದನು |
| ಕಾದಾಟದಾಟ | ಆದನೆಂಬ | ನೆತ್ತರೊಂದೆ |
| ತೆಗೆದುತ್ತರೀಯಮಂ | ಬೇಡಬೇಡರಸುಗಳ | |

# 6. ಕನ್ನಡ ಸಂಧಿಗಳು

## ಆಗಮ ಸಂಧಿ

| | | |
|---|---|---|
| ಕೈಯನ್ನು | ಮಳೆಯಿಂದ | ಶಾಲೆಯಲ್ಲಿ |
| ಮರವನ್ನು | ಮಗುವಿಗೆ | ಭೇದವಿಲ್ಲ |
| ವೃದ್ಧಿಯಾಗಿ | ಭೇದವಾಗಿ | ಮನೆಯೊಳಗೆ |
| ಶವವಾದವು | | |

## ಆದೇಶ ಸಂಧಿ

| | | |
|---|---|---|
| ಮಳೆಗಾಲ | ಮೈದೋರು | ಬೆಂಬತ್ತು |
| ಕೈವಿಡಿದು | ಧೃತಿಗೆಟ್ಟು | ಪೋಗಲ್ವೇಳ್ಕುಂ |
| ಹೊಸಗಾಲ | | |

# 6. ಸಂಸ್ಕೃತ ಸಂಧಿ

## ಸವರ್ಣದೀರ್ಘ ಸಂಧಿ

| | | |
|---|---|---|
| ಮಹಾತ್ಮ | ಗಿರೀಶ | ಸುರಾಸುರ |
| ವಧೂಪೇತ | ಸಕಳಾಚಾರ್ಯ | ಜಿನಾಲಯ |
| ಚಂದ್ರಾರ್ಕ | ನಿಜಾಶ್ರಮ | |

## ವೃದ್ಧಿ ಸಂಧಿ

| | | |
|---|---|---|
| ಏಕೈಕ | ಜನೈಕ್ಯ | ವನೌಷಧಿ |
| ಅಷ್ಟೈಶ್ವರ್ಯ | | |

# 6. ಸಂಸ್ಕೃತ ಸಂಧಿ

## ಗುಣ ಸಂಧಿ

ದೇವೇಂದ್ರ
ಜ್ಞಾನೇಶ್ವರ
ಸೂರ್ಯೋದಯ
ಮಹರ್ಷಿ
ಮಹೇಶ
ಮಂಡಳೇಶ್ವರ
ಕಲೋಪಾಸಕ

## ಯಣ್ ಸಂಧಿ

ಅತ್ಯವಸರ
ಕೋಟ್ಯಧೀಶ್ವರ
ಕೋಟ್ಯನುಕೋಟಿ
ಜಾತ್ಯತೀತ

# 6. ಸಂಸ್ಕೃತ ಸಂಧಿ

## ಜಶ್ತ್ವ ಸಂಧಿ

ವಾಗ್ದೇವಿ ಅಜಂತ ಷಡಾನನ
ದಿಗಂತ ಅಬ್ಧಿ

## ಶ್ಚುತ್ವ ಸಂಧಿ

ಪಯಶ್ಶಯನ ಶರಚ್ಚಂದ್ರ ಜಗಜ್ಜ್ಯೋತಿ
ಬೃಹಚ್ಛತ್ರ

## ಅನುನಾಸಿಕ ಸಂಧಿ

ಷಣ್ಮುಖ ಸನ್ಮಾನ ವಾಙ್ಮಯ
ಉನ್ಮಾದ ತನ್ಮಯ ಶ್ರೀಮನ್ಮಹಾ

¨B RAVEESH KUMAR - 9448958498

# 7. ತತ್ಸಮ – ತದ್ಭವ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ದೃಷ್ಟಿ | ದಿಟ್ಟಿ | ತಪಸ್ವಿ | ತವಸಿ |
| ಗ್ರಹ | ಗರ | ವಿಜ್ಞಾನ | ಬಿನ್ನಣ |
| ಮುಖಶಾಲೆ | ಮೊಗಸಾಲೆ | ದಾತೃ | ದಾತಾರ |
| ವಿಜ್ಞಾಪನೆ | ಬಿನ್ನಹ | ಸಾಮಂತ | ಸಾವಂತ |
| ಸುಧಾ / ಸುಧೆ | ಸೊದೆ | ತಟ | ತಡಿ |
| ವರ್ಷ | ವರುಷ / ಬರಿಸ | ಶ್ರೀ | ಸಿರಿ |
| ರಾಜ | ರಾಯ | ಭಕ್ತ | ಬಕುತ |
| ದಿಶಾ | ದೆಸೆ | ಚಂದ್ರ | ಚಂದಿರ |
| ವೀರ | ಬೀರ | ವಂಶ | ಬಂಚ |
| ಸ್ಥಾನ | ತಾಣ | ಯಶ | ಜಸ |
| ಪಟ್ಟಣ | ಪತ್ತನ | ಕಾರ್ಯ | ಕಜ್ಜ |
| ವ್ಯಯ | ಬೀಯ | ಕೋಕಿಲಾ | ಕೋಗಿಲೆ |

# 7. ತತ್ಸಮ – ತದ್ಭವ

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ವ್ಯಾಪಾರಿ | ಬೇಹಾರಿ | ಸಂದೇಹ | ಸಂದೆಯ |
| ಅಮೃತ | ಅಮರ್ದು | ದೀಪಿಕಾ | ದೀವಿಗೆ |
| ಪುಣ್ಯ | ಹೂನ್ಯ | ಕಣಿ | ಗಣಿ |
| ಪಕ್ಷಿ | ಹಕ್ಕಿ | ಬ್ರಹ್ಮ | ಬೊಮ್ಮ |
| ಶಶಿ | ಸಸಿ | ಶಿರ | ಸಿರ |
| ಕಲಶ | ಕಲಸ | ಅಂಕುಶ | ಅಂಕುಸ |
| ದ್ಯೂತ | ಜೂಜು | ವಂಧ್ಯಾ | ಬಂಜೆ |
| ವಿದ್ಯಾಧರ | ಬಿಜ್ಜೋದರ | ವೈಶಾಖ | ಬೇಸಗೆ |
| ಕುಠಾರ | ಕೊಡಲಿ | ಪಾದುಕಾ | ಹಾವುಗೆ |
| ಅರ್ಕ | ಎಕ್ಕ | ಶುನಕ | ಸೊಣಗ |
| ಅಟವಿ | ಅಡವಿ | ಪ್ರಸಾದ | ಹಸಾದ |
| ಯಜ್ಞ | ಜನ್ನ | ಕಾವ್ಯ | ಕಬ್ಬ |

# 8. ಅನ್ಯದೇಶೀಯ ಪದಗಳು

| ಫಾರ್ಸಿ / ಪರ್ಷಿಯನ್ ಭಾಷೆ ಪದಗಳು | | | | |
|---|---|---|---|---|
| ಅಬಕಾರಿ | ರಸ್ತೆ | ದವಾಖಾನೆ | ಚೌಕಾಷಿ | ದಿವಾನ |
| ಆಮೀನು | ಅಜಮಾಯಿಸಿ | ಆಮದು | ದಲ್ಲಾಳಿ | |

| ಗ್ರೀಕ್ ಮತ್ತು ರೋಮನ್ ಭಾಷೆ ಪದಗಳು | | | | |
|---|---|---|---|---|
| ದಮ್ಮಡಿ | ದಮಡಿ | ದಮ್ಮು | ದೀನಾರ | ಗದ್ಯಾಣ |

| ಅರಬ್ಬೀ ಭಾಷೆ ಪದಗಳು | | | |
|---|---|---|---|
| ಅಮಾನತು | ಅಸಲು | ಇನಾಮು | ಕಾಯ್ದೆ |
| ಗಲೀಜು | ತಕರಾರು | ತರಬೇತು | ನಕಲಿ |

# 8. ಅನ್ಯದೇಶೀಯ ಪದಗಳು

| ಪೋರ್ಚ್‌ಗೀಸ್ ಭಾಷೆ ಪದಗಳು | | | | |
|---|---|---|---|---|
| ಮೇಜು | ತಂಬಾಕು | ಅನಾನಸು | ಸಾಬೂನು | ರಸೀದಿ |
| ಆಸ್ಪತ್ರೆ | ಚೊಂಬು | ಚಾ | ಇಸ್ತ್ರಿ | |

| ಉರ್ದು ಭಾಷೆ ಪದಗಳು | | | |
|---|---|---|---|
| ಕಿಮ್ಮತ್ತು | ತಾರೀಖು | ತಾಲೂಕು | ಅಹವಾಲು |
| ಇಲಾಖೆ | ದರ್ಜೆ | ಬಂದೂಕು | ರುಜು |
| ಶುರು | ಶಾಮೀಲು | | |

| ಹಿಂದೂಸ್ಥಾನೀ ಭಾಷೆ ಪದಗಳು | | | |
|---|---|---|---|
| ಅರ್ಜಿ | ಕಚೇರಿ | ಕಾರ್ಖಾನೆ | ಸಲಾಮು |
| ದರ್ಬಾರು | ಕುರ್ಚಿ | ಕಾಗದ | ಹುಕುಂ |

| ಇಂಗ್ಲಿಷ್ ಭಾಷೆ ಪದಗಳು | | | |
|---|---|---|---|
| ಬಸ್ಸು | ಕಾರು | ಕಾಲೇಜು | ಲೈಟು |
| ಪೆನ್ನು | ಸೋಪು | ಡಿಪ್ಲೊಮಾ | |

# 9. ಗ್ರಾಂಥಿಕ ರೂಪ

| ಗ್ರಾಮ್ಯ/ಆಡು ನುಡಿ | ಗ್ರಾಂಥಿಕ ರೂಪ | ಗ್ರಾಮ್ಯ/ಆಡು ನುಡಿ | ಗ್ರಾಂಥಿಕ ರೂಪ |
|---|---|---|---|
| ಹೀಂಗ | ಹೀಗೆ | ಮ್ಯಾಗ | ಮೇಲೆ |
| ಕಳುವ್ಯಾರೆ | ಕಳುಹಿಸಿದ್ದಾರೆ | ಇಲ್ಲದ್ದಂಗ | ಇಲ್ಲದ ಹಾಗೆ |
| ಇಸವಾಸ | ವಿಶ್ವಾಸ | ಸಕ್ಕಾರಿ | ಸಕ್ಕರೆ |

# 10. ದ್ವಿರುಕ್ತಿಗಳು

| | | | |
|---|---|---|---|
| ಹೌದುಹೌದು | ನಿಲ್ಲುನಿಲ್ಲು | ಬಂದೆಬಂದೆ | ದೊಡ್ಡದೊಡ್ಡ. |
| ಹೆಚ್ಚುಹೆಚ್ಚು | ಮನೆಮನೆ | ಕೇರಿಕೇರಿ | ಊರೂರು |
| ನಿಲ್ಲುನಿಲ್ಲು. | ಎಲೇಎಲೇ | ಬನ್ನಿಬನ್ನಿ | ಹತ್ತಿರಹತ್ತಿರ. |
| ಅಗೋಅಗೋ | ಅಬ್ಬಬ್ಬಾ! | ಆಹಾಹಾ | ಬೇಡಬೇಡ |
| ಕೊಡುಕೊಡು | ನಡೆನಡೆ | ಅಮ್ಮಾಅಮ್ಮಾ | ಆಗಲಿಆಗಲಿ |
| ಬೇಗಬೇಗ | ನಡೆನಡೆ | ಓಡುಓಡು | ಕೆಟ್ಟೆಕೆಟ್ಟೆ, |
| ಸಾಕುಸಾಕು | ಹಾವುಹಾವು | ಈಗೀಗ | ನೋಡಿನೋಡಿ |
| ದುರುಳಾದುರುಳಾ | ಅಯ್ಯೋಅಯ್ಯೋ | | ಬೆಂಕಿಬೆಂಕಿ. |
| ದೇವರೆದೇವರೇ | ತಿರುತಿರುಗಿ | ಒಬ್ಬೊಬ್ಬ | |

# 10. ದ್ವಿರುಕ್ತಿಗಳು

**ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು.**

| | |
|---|---|
| ಮೊದಲು + ಮೊದಲು | = ಮೊತ್ತಮೊದಲು/ಮೊಟ್ಟಮೊದಲು |
| ಕಡೆಗೆ + ಕಡೆಗೆ | = ಕಟ್ಟಕಡೆಗೆ / ಕಡೆಕಡೆಗೆ |
| ನಡುವೆ + ನಡುವೆ | = ನಟ್ಟನಡುವೆ / ನಡುನಡುವೆ |
| ಬಯಲು +ಬಯಲು | = ಬಟ್ಟಬಯಲು |
| ತುದಿ + ತುದಿ | = ತುತ್ತತುದಿ |
| ಕೊನೆಗೆ + ಕೊನೆಗೆ | = ಕೊನೆಕೊನೆಗೆ |
| ಮೆಲ್ಲನೆ + ಮೆಲ್ಲನೆ | = ಮೆಲ್ಲಮೆಲ್ಲನೆ |

# 10. ಜೋಡುನುಡಿಗಳು

- ಸತಿಪತಿ
- ಮಕ್ಕಳುಮರಿ
- ಬಟ್ಟೆಬರೆ

ಕೆನೆಮೊಸರು

ಹುಳಹುಪ್ಪಡಿ

ಹಾಲ್ಜೇನು

ಸೊಪ್ಪುಸದೆ

# 11. ಸಮಾಸಗಳು

## ತತ್ಪುರುಷ ಸಮಾಸ

| | | |
|---|---|---|
| ಬೆಟ್ಟದಾವರೆ | ತಲೆನೋವು | ದೈವಭಕ್ತಿ |
| ಸ್ವಾಮಿದ್ರೋಹ | ಪರಧನ | ಪೂದೋಟ |
| ಕಾಲುಬಳೆ | ಧನದಹರಣ | |

## ಕರ್ಮಧಾರಯ ಸಮಾಸ

| | | |
|---|---|---|
| ಇಮ್ಮಾವು | ಮೆಲ್ವಾತು | ಹೊಸಗನ್ನಡ |
| ಅತಿಕುಟಿಲ | ಕಟ್ಟೇಕಾಂತ | ಪೆರ್ಮಗ |
| ಪೆರ್ಮರ | ನಲ್ಗುದುರೆ | ಹೆದ್ದೊರೆ |

# 11. ಸಮಾಸಗಳು

## ದ್ವಿಗು ಸಮಾಸ

| | | |
|---|---|---|
| ಮೂಗಾವುದ | ಮುಕ್ಕಣ್ಣು | ಸಪ್ತಸ್ವರಗಳು |

## ಬಹುವ್ರೀಹಿ ಸಮಾಸ

| | | |
|---|---|---|
| ಹಣೆಗಣ್ಣ | ಮುಕ್ಕಣ್ಣ | ಚಕ್ರಪಾಣಿ |
| ಅಬ್ಜೋದರ | ಘಟಸಂಭೂತ | ಗಾಂಡೀವಿ |
| ಪವನನಂದನ | ಮದಾಂಧ | ಇನತನೂಜ |
| ದನುಜರಿಪು | ಮುರಾರಿ | ಮೇದಿನೀಪತಿ |
| ರಾಜೀವಸಖ | | |

# 11. ಸಮಾಸಗಳು

## ಅಂಶಿ ಸಮಾಸ

| | | |
|---|---|---|
| ಅಂಗೈ | ಹಿಂದಲೆ | ಕಡೆಗಣ್ಣು |
| ಮುಂಗೈ | ನಡುರಾತ್ರಿ | ನಟ್ಟಡವಿ |

## ದ್ವಂದ್ವ ಸಮಾಸ

| | |
|---|---|
| ಗಿರಿವನದುರ್ಗಗಳು | ಕರಿತುರಗರಥಗಳು |
| ಹನುಮಭೀಮರಾಮರು | ಸೂರ್ಯಚಂದ್ರರು |
| ಮಾದ್ರಮಾಗಧಯಾದವರು | ಕೆರೆಕಟ್ಟೆಬಾವಿಗಳು |

# 11. ಸಮಾಸಗಳು

## ಕ್ರಿಯಾ ಸಮಾಸ

| | | |
|---|---|---|
| ಮೈಮುಚ್ಚು | ಕಣ್ದೆರೆ | ಕಂಗೆಡು |
| ಕೈಕೊಳ್ವುದು | ಸಾಕ್ಷಿಮಾಡಿ | ಬಲವಂದು |
| ಮೋಸಮಾಡು | ಕೈಯಾನು | ಹೊಗೆದೋರು |
| ಸೊಲ್ಗೇಳಿ | ಬಿಲ್ಗೊಂಡು | ಬಿಲ್ದಿರುವನೇರಿಸಿ |

## ಗಮಕ ಸಮಾಸ

| | | |
|---|---|---|
| ಆ ಕಲ್ಲು | ಈ ಬೆಕ್ಕು | ನೆಯ್ದವಸ್ತ್ರ |

# 12. ಸಮಾನಾರ್ಥಕ ಪದಗಳು

| | | | |
|---|---|---|---|
| ಅನೃತ | ಸುಳ್ಳು | ಕೃತ್ರಿಮ | ಮೋಸ |
| ಬಾನು | ಆಕಾಶ | ಭಾನು | ಸೂರ್ಯ |
| ಕುರುಕುಳನಂದನ | ದುರ್ಯೋಧನ | ಪವನನಂದನ | ಭೀಮ |
| ಸೂರ್ಯ | ರವಿ | ಎದೆ | ಉರ |
| ಮೇಘ | ಮೋಡ | ಗಡ | ಸಣ್ಣಕೋಟೆ |
| ಹರಸು | ಆಶೀರ್ವದಿಸು | ಕೆನ್ನ | ಕೆಂಬಣ್ಣ |
| ವಿಲಾತಿ | ವಿಲಾಯಿತಿ | ಅಬ್ಧಿಪ | ವರುಣ |
| ತುರಗ | ಅಶ್ವ | ಮತ್ತು | ಅಮಲು |
| ಹಮ್ಮು | ಗರ್ವ | ಶವ | ಹೆಣ |
| ಮರಣ | ಸಾವು | ಸಂಕಟ | ದುಃಖ |
| ಇರಿವನ್ನರ್ | ಯುದ್ಧ ಮಾಡುವವರು | ಅಗಡು | ಶೌರ್ಯ |

# 13. ಲೇಖನ ಚಿಹ್ನೆಗಳು

| | | |
|---|---|---|
| 1. | ಪೂರ್ಣವಿರಾಮ ಚಿಹ್ನೆ | ( . ) |
| 2. | ಅರ್ಧ ವಿರಾಮ ಚಿಹ್ನೆ | ( ; ) |
| 3. | ಅಲ್ಪ ವಿರಾಮ ಚಿಹ್ನೆ | ( , ) |
| 4. | ಪ್ರಶ್ನಾರ್ಥಕ ಚಿಹ್ನೆ | ( ? ) |
| 5. | ಭಾವಸೂಚಕ ಚಿಹ್ನೆ | ( ! ) |
| 6. | ವಿವರಣಾತ್ಮಕ ಚಿಹ್ನೆ | ( :– / : ) |
| 7. | ಉದ್ಧರಣ ಚಿಹ್ನೆ | ( “ ” ) |
| 8. | ವಾಕ್ಯವೇಷ್ಟನ ಚಿಹ್ನೆ | ( ‘ ’ ) |
| 9. | ಆವರಣ ಚಿಹ್ನೆ | (   ) |

# 13. ಲೇಖನ ಚಿಹ್ನೆಗಳು

- **ಪೂರ್ಣವಿರಾಮ : – ( . )** ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ 'ಪೂರ್ಣವಿರಾಮ ಚಿಹ್ನೆ'ಯನ್ನು ಬಳಸಬೇಕು.
- **ಅರ್ಧವಿರಾಮ ಚಿಹ್ನೆ :– ( ; )** ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ 'ಅರ್ಧವಿರಾಮ ಚಿಹ್ನೆ'ಯನ್ನು ಬಳಸಲಾಗುವುದು.
- **ಉದಾಹರಣೆ :** ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

# 13. ಲೇಖನ ಚಿಹ್ನೆಗಳು

- **ಅಲ್ಪವಿರಾಮ ಚಿಹ್ನೆ :- ( , )** ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ 'ಅಲ್ಪವಿರಾಮ ಚಿಹ್ನೆ'ಯನ್ನು ಬಳಸಬೇಕು.
- **ಉದಾಹರಣೆ :** ಬಟ್ಟೆ ಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.
- **ಪ್ರಶ್ನಾರ್ಥಕ ಚಿಹ್ನೆ :- ( ? )** ಪ್ರಶ್ನಾರೂಪದ ಪದ ಮತ್ತು ವಾಕ್ಯಗಳ ಮುಂದೆ 'ಪ್ರಶ್ನಾರ್ಥಕ ಚಿಹ್ನೆ'ಯನ್ನು ಬಳಸಲಾಗುವುದು.

# 13. ಲೇಖನ ಚಿಹ್ನೆಗಳು

- **ಭಾವಸೂಚಕ ಚಿಹ್ನೆ :–** ( ! ) ಹರ್ಷ, ಅಶ್ಚರ್ಯ, ಸಂತೋಷ, ವಿಷಾದ, ದುಃಖ, ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ 'ಭಾವಸೂಚಕ ಚಿಹ್ನೆ'ಯನ್ನು ಬಳಸಲಾಗುವುದು.
- **ಉದಾಹರಣೆ :** ಅಯ್ಯೋ ! ಹೀಗಾಗಬಾರದಿತ್ತು !
- **ಉದ್ಧರಣ ಚಿಹ್ನೆ :–** ( " " ) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ. ಬರೆಯುವಾಗ 'ಉದ್ಧರಣ ಚಿಹ್ನೆ'ಯನ್ನು ಬಳಸಲಾಗುವುದು.
- **ಉದಾಹರಣೆ :** "ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು" ಎಂದು ಸರ್. ಎಂ. ವಿಶ್ವೇಶ್ವರಯ್ಯ ಅವರು ಹೇಳಿದರು.

# 13. ಲೇಖನ ಚಿಹ್ನೆಗಳು

- **ವಾಕ್ಯವೇಷ್ಟನ ಚಿಹ್ನೆ :- ( ‘ ‘ )** ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ ‘ವಾಕ್ಯವೇಷ್ಟನ ಚಿಹ್ನೆ’ಯನ್ನು ಬಳಸಲಾಗುವುದು.
- **ಉದಾಹರಣೆ :** ಕನ್ನಡದಲ್ಲಿ ‘ಇಂಗ್ಲೀಷ್’, ‘ಪರ್ಷಿಯನ್’, ‘ಪೋರ್ಚುಗೀಸ್’ ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

# 13. ಲೇಖನ ಚಿಹ್ನೆಗಳು

- **ಆವರಣ ಚಿಹ್ನೆ :–** ( ) ಒಂದು ಪದವನ್ನೋ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ 'ಆವರಣ ಚಿಹ್ನೆ'ಯನ್ನು ಬಳಸಲಾಗುತ್ತದೆ.
- **ಉದಾಹರಣೆ :** ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜ಼ನ್), ಜಲಜನಕ (ಹೈಡ್ರೋಜ಼ನ್)ಗಳು ಉತ್ಪತ್ತಿಯಾಗುತ್ತವೆ.
- **ವಿವರಣಾತ್ಮಕ ಚಿಹ್ನೆ :–** ( :– ) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ 'ವಿವರಣಾತ್ಮಕ'ಚಿಹ್ನೆಯನ್ನು ಬಳಸಲಾಗುತ್ತದೆ.

# 14. ವಾಕ್ಯ ಪ್ರಭೇದಗಳು

**ಸಾಮಾನ್ಯ ವಾಕ್ಯ :–** ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು **‘ಸಾಮಾನ್ಯ ವಾಕ್ಯ’** ಎಂದು ಕರೆಯುತ್ತಾರೆ.

**ಉದಾ:–**

1. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
2. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
3. ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**ಸಾಮಾನ್ಯ ವಾಕ್ಯದಲ್ಲಿ ಒಂದು ಕ್ರಿಯಾಪದ ಮಾತ್ರವಿದ್ದು, ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು.**

**ಉದಾ :–** ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

# 14. ವಾಕ್ಯ ಪ್ರಭೇದಗಳು

- **ಸಂಯೋಜಿತ ವಾಕ್ಯ :–** ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು **'ಸಂಯೋಜಿತ ವಾಕ್ಯ'** ಎನಿಸುವುದು.

- **ಉದಾ:–** ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು.

# 14. ವಾಕ್ಯ ಪ್ರಭೇದಗಳು

- **ಮಿಶ್ರವಾಕ್ಯ :-** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು **‘ಮಿಶ್ರವಾಕ್ಯ’** ಎನ್ನುತ್ತೇವೆ.

- **ಉದಾ:-** ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

# 15. ಕೃದಂತಗಳು

| ವರ್ತಮಾನ ಕೃದಂತಗಳು | ಭೂತ ಕೃದಂತಗಳು | ನಿಷೇಧ ಕೃದಂತಗಳು |
|---|---|---|
| ಓಡುವ | ಓಡಿದ | ಓಡದ |
| ಬಾಳುವ | ಬಾಳಿದ | ಬಾಳದ |
| ಬರೆಯುವ | ಬರೆದ | ಬರೆಯದ |

# 15. ಕೃದಂತಗಳು

| ಕೃದಂತನಾಮಗಳು | ಕೃದಂತ ಭಾವನಾಮಗಳು | ಕೃದಂತಾವ್ಯಯಗಳು |
|---|---|---|
| ಮಾಡಿದ | ಮಾಟ | ಮಾಡಿ |
| ತಿನ್ನುವ | ತಿನ್ನುವಿಕೆ | ತಿಂದು |
| ನಡೆಯುವ | ನಡೆತ | ನಡೆಯುತ್ತ |
| ಓಡಿದ | ಓಟ | ಓಡಿ |

# 15. ಕೃದಂತಗಳು

| ಕೃದಂತನಾಮಗಳು | ಕೃದಂತ ಭಾವನಾಮಗಳು | ಕೃದಂತಾವ್ಯಯಗಳು |
|---|---|---|
| ಮಾಡಿದ | ಮಾಟ | ಮಾಡಿ |
| ತಿನ್ನುವ | ತಿನ್ನುವಿಕೆ | ತಿಂದು |
| ನಡೆಯುವ | ನಡೆತ | ನಡೆಯುತ್ತ |
| ಓಡಿದ | ಓಟ | ಓಡಿ |

# 15. ಕೃದಂತ ಭಾವನಾಮಗಳು

| ಧಾತು | ಕೃತ್ ಪ್ರತ್ಯಯ | ಕೃದಂತ ಭಾವನಾಮಗಳು |
|---|---|---|
| ಓಡು | ಟ | ಓಟ |
| ನೋಡು | ಟ | ನೋಟ |
| ಬಾಳು | ವಿಕೆ | ಬಾಳುವಿಕೆ |
| ಬರೆ | ವಿಕೆ | ಬರೆಯುವಿಕೆ |
| ಅಂಜು | ಇಕೆ | ಅಂಜಿಕೆ |
| ನಂಬು | ಇಕೆ | ನಂಬಿಕೆ |
| ಉಡು | ಗೆ | ಉಡುಗೆ |
| ತೊಡು | ಗೆ | ತೊಡುಗೆ |
| ನಗು | ಉದು | ನಗುವುದು |
| ತಿನ್ನು | ಉದು | ತಿನ್ನುವುದು |

# 15. ಕೃದಂತಾವ್ಯಯಗಳು

| ಧಾತು | ಕೃತ್ ಪ್ರತ್ಯಯ | ಕೃದಂತಾವ್ಯಯಗಳು |
|---|---|---|
| ಉಣ್ಣು | ಅದೆ | ಉಣ್ಣದೆ |
| ಮಾಡು | ಅದೆ | ಮಾಡದೆ |
| ಬರು | ಉತ್ತ | ಬರುತ್ತ |
| ಮಾಡು | ಉತ್ತ | ಮಾಡುತ್ತ |
| ಬರೆ | ದು | ಬರೆದು |
| ಹೋಗು | ಅಲಿಕ್ಕೆ | ಹೋಗಲಿಕ್ಕೆ |
| ಮಾಡು | ಅಲಿಕ್ಕೆ | ಮಾಡಲಿಕ್ಕೆ |
| ಮಾಡು | ಅಲು | ಮಾಡಲು |
| ಮಾಡು | ಅ | ಮಾಡ |
| ಮಾಡು | ಇ | ಮಾಡಿ |

# 16. ತದ್ಧಿತಾಂತಗಳು

| ತದ್ಧಿತಾಂತ ನಾಮ | | ತದ್ಧಿತಾಂತ ಭಾವನಾಮ | ತದ್ಧಿತಾಂತ ಅವ್ಯಯ | |
|---|---|---|---|---|
| ಪುಲ್ಲಿಂಗ | ಸ್ತ್ರೀಲಿಂಗ | | | |
| | | ಬಡತನ | ಚಂದ್ರನಂತೆ | ಅವನಂತೆ |
| ಮೋಸಗಾರ | ಮೋಸಗಾರ್ತಿ | ಸಿರಿತನ | ಚಂದ್ರನವೊಲ್ | ಅವನವೊಲ್ |
| ಕನ್ನಡಿಗ | ಕನ್ನಡತಿ | ಹಿರಿಮೆ | ಮನೆಯವೋಲು | ಇದರವೋಲು |
| ಬಳೆಗಾರ | ಬಳೆಗಾರ್ತಿ | ಜಾಣತನ | ಕರಡಿಯವೋಲ್ | ನದಿಯವೋಲ್ |
| ಕೋಲುಕಾರ | ಕೋಲುಕಾರ್ತಿ | ಚೆಲುವಿಕೆ | ಮನೆಯತನಕ | ಹಿಮಾಲಯದತನಕ |
| ಸಿರಿವಂತ | ಸಿರಿವಂತೆ | ಕಪ್ಪು | ಶಾಲೆಯವರೆಗೆ | ಪಟ್ಟಣದವರೆಗೆ |
| | | ಪೆರ್ಮೆ | ಇವಳಮಟ್ಟಿಗೆ | ಸುಂದರನಮಟ್ಟಿಗೆ |
| | | | ನನಗೋಸ್ಕರ | ಬೆಕ್ಕಿಗೋಸ್ಕರ |
| | | | ಅರ್ಜುನನ ಸಲುವಾಗಿ | ಕಟ್ಟಡದ ಸಲುವಾಗಿ |
| | | | ರಾಧೆಗಿಂತ | ಅದಕ್ಕಿಂತ |
| | | | ನಿನಗಾಗಿ | ಇದಕ್ಕಾಗಿ |
| | | | ಮದುವೆಗೋಸುಗ | ಕಾಗೆಗೋಸುಗ |

# 17. ಅವ್ಯಯಗಳು

- ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು '<u>ಅವ್ಯಯಗಳು</u>' ಎನ್ನುವರು.

**ಸಾಮಾನ್ಯಾವ್ಯಯಗಳು**

- ಯಾವುದಾರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳೇ '<u>ಸಾಮಾನ್ಯಾವ್ಯಯಗಳು</u>' ಎನ್ನುವರು. ಇವು ಹೆಚ್ಚಾಗಿ ವಿಶೇಷಣಗಳಾಗಿರುತ್ತವೆ.

| | | | |
|---|---|---|---|
| ಉದಾ:– | ಬೇಗನೆ, | ಮೆಲ್ಲಗೆ, | ತರುವಾಯ, |
| | ಸೊಗಸಾಗಿ, | ಸುಮ್ಮನೆ | ತಟ್ಟನೆ, |
| | ಹಾಗೆ, | ಅಂತು | ಬೇರೆ, |
| | ಬಳಿಕ, | ಕೂಡಲೆ, | ಚೆನ್ನಾಗಿ |

# 17. ಅವ್ಯಯಗಳು

## ಅನುಕರಣಾವ್ಯಯಗಳು

- ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು 'ಅನುಕರಣಾವ್ಯಯಗಳು' ಎಂದು ಕರೆಯುತ್ತಾರೆ.

| | | |
|---|---|---|
| ಉದಾ:– ಚಟಚಟ, | ಕರಕರ, | ಚುರುಚುರು, |
| ಧಗಧಗ | ರೊಯ್ಯನೆ | ಸುಯ್ಯನೆ |
| ಘುಳುಘುಳು | ದಡದಡ | |

# 17. ಅವ್ಯಯಗಳು

**ಭಾವಸೂಚಕಾವ್ಯಯಗಳು**

- ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ – ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ. ಅಂತಹ ಪದಗಳನ್ನು **'ಭಾವಸೂಚಕಾವ್ಯಯಗಳು'** ಎಂದು ಕರೆಯುತ್ತಾರೆ.

ಉದಾ:– ಅಹಾ! ಭಳಿರೆ! ಓಹೋ!
ಹೋ! ಅಃ! ಆಃ! ಓ!

# 17. ಅವ್ಯಯಗಳು

## ಕ್ರಿಯಾರ್ಥಕಾವ್ಯಯಗಳು

- ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು **'ಕ್ರಿಯಾರ್ಥಕ ಅವ್ಯಯಗಳು'** ಎಂದು ಕರೆಯಲಾಗಿದೆ.

- ಉದಾ :– ಅಹುದು, ಸಾಕು, ಅಲ್ಲ,
  ಹೌದು, ಬೇಡ, ಉಂಟು

# 17. ಅವ್ಯಯಗಳು

## ಸಂಬಂಧಾರ್ಥಕಾವ್ಯಯಗಳು

- ಎರಡು ಪದಗಳನ್ನಾಗಲೀ, ಹಲವು ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವಂತಹ ಅಥವಾ ಸಂಬಂಧಗೊಳಿಸುವಂತಹ ಪದಗಳೇ ‘ಸಂಬಂಧಾರ್ಥಕಾವ್ಯಯಗಳು’
- ಉದಾ:- ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ, ಇತ್ಯಾದಿ.
- **ಪದಗಳ ಜೋಡಣೆ :-**
- ರಾಮನೂ ಲಕ್ಷ್ಮಣನೂ ಸೀತೆಯೂ ಕಾಡಿಗೆ ಹೊರಟರು.
- **ಪದ ಸಮುಚ್ಚಯ ಜೋಡಣೆ :-**
- ಅವನು ಬರುವುದೂ ಬೇಡ; ಆ ಕೆಲಸ ಆಗುವುದೂ ಬೇಡ.
- **ವಾಕ್ಯಗಳ ಜೋಡಣೆ :-**
- ಅವನು ಬರಲಿಲ್ಲ ಆದ್ದರಿಂದ ನಾನೂ ಬರಲಿಲ್ಲ.

# 17. ಅವ್ಯಯಗಳು

## ಅವಧಾರಣಾರ್ಥಕಾವ್ಯಯಗಳು

- ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು **'ಅವಧಾರಾಣಾರ್ಥಕಾವ್ಯಯ'** ಎಂದು ಕರೆಯುತ್ತಾರೆ. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.
- **ಉದಾ:–** ಅವನೇ, ಅದುವೇ,
  ಅವಳೇ, ನೀನೇ

# 18. ಉಪಮಾಲಂಕಾರಗಳು

- ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ.
- ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ
- ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ.
- ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ.
- ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.
- ಸೀತೆಯ ಮುಖ ಕಮಲದಂತೆ ಅರಳಿತು.

# 18. ರೂಪಕಾಲಂಕಾರಗಳು

- ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ
- ಸೀತೆಯ ಮುಖಕಮಲ ಅರಳಿತು.
- ಮಾರಿಗೌತಣವಾಯ್ತು ನಾಳಿನ ಭಾರತವು.

# 18. ದೃಷ್ಟಾಂತ ಮತ್ತು ಉತ್ಪ್ರೇಕ್ಷಾಲಂಕಾರಗಳು

## ದೃಷ್ಟಾಂತಾಲಂಕಾರ

- ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

## ಉತ್ಪ್ರೇಕ್ಷಾಲಂಕಾರ

- ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

# 18. ಶ್ಲೇಷಾಲಂಕಾರಗಳು

## ಶ್ಲೇಷಾಲಂಕಾರ

ಅತಿಶಯ ಪದಾರ್ಥ ನಿಕರ ।
ಪ್ರತೀತಿಯಂ ಪಡೆದ ಪಾದವಿನ್ಯಾಸಂ ಭೂ ॥
ನುತಮಾಗದಲ್ತೆನಿರ್ದೋಱ ।
ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥

# 18. ಅರ್ಥಾಂತರನ್ಯಾಸಾಲಂಕಾರಗಳು

“ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?”

ಜಲನಿಧಿಜಲಮಂ ಜಲಭೃ ।
ತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿ ॥
ರ್ಮಲ ಸಲಿಲಂ ದೊರೆದುದು ಗಡ ।
ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ ॥

# 19. ಛಂದಸು, ಅಕ್ಷರ ಗಣ

1. ಗುರು ಮೂರಿರೆ **ಮಗಣ**
2. ಲಘು ಮೂರಿರೆ **ನಗಣ**
3. ಗುರು ಮೊದಲಲ್ಲಿ ಬರಲು **ಭಗಣ**
4. ಲಘು ಮೊದಲಲ್ಲಿ ಬರಲು **ಯಗಣ**
5. ಗುರು ನಡುವಿರೆ **ಜಗಣ**
6. ಲಘು ನಡುವಿರೆ **ರಗಣ**
7. ಗುರು ಕೊನೆಯಲ್ಲಿ ಬರಲು **ಸಗಣ**
8. ಲಘು ಕೊನೆಯಲ್ಲಿ ಬರಲು **ತಗಣ**

# 20. ಖ್ಯಾತ ಕರ್ನಾಟಕ ವೃತ್ತ ಪದ್ಯಗಳು

1. **ಗುರುವೊಂದಾದಿಯೊಳುತ್ಪಲಂ** = ( — ∪ ∪ )
ಮೊದಲನೆ ಅಕ್ಷರವು ಗುರುವಾಗಿದ್ದರೆ (ನಂತರದ ಎರಡು ಅಕ್ಷರಗಳು ಲಘುಗಳು) ಅದನ್ನು**'ಉತ್ಪಲಾಮಾಲಾ ವೃತ್ತ'** ಎನ್ನುವರು.

2. **ಗುರುಮೊದಲ್ಮೂರಾಗೆಶಾರ್ದೂಲಮ್** =( — — —, ∪ ∪ — )
ಮೊದಲ ಮೂರು ಅಕ್ಷರಗಳು ಗುರುವಾಗಿದ್ದರೆ (ನಂತರದ ಎರಡು ಅಕ್ಷರಗಳು ಲಘು) ಅದನ್ನು**'ಶಾರ್ದೂಲ ವಿಕ್ರೀಡಿತವೃತ್ತ'** ಎನ್ನುವರು.

3. **ಆ ಗುರುನಾಲ್ಕಾಗಿರಲಂತು ಸ್ರಗ್ಧರೆ** = ( — — —, — ∪ — )
ಮೊದಲ ನಾಲ್ಕು ಅಕ್ಷರಗಳು ಗುರುವಾಗಿದ್ದರೆ (ನಂತರದ ಅಕ್ಷರವು ಲಘು) ಅದನ್ನು 'ಸ್ರಗ್ಧರಾ ವೃತ್ತ' ಎನ್ನುವರು.

# 20. ಖ್ಯಾತ ಕರ್ನಾಟಕ ವೃತ್ತ ಪದ್ಯಗಳು

**4. ಲಘು ದ್ವಂದ್ವಂ ಗುರು ದ್ವಂದ್ವಮಾಗಿರೆ ಮತ್ತೇಭ** = ( ∪ ∪ —, — ∪ ∪ )
ಮೊದಲ ಎರಡು ಅಕ್ಷರಗಳು ಲಘುವಾಗಿದ್ದು ಹಾಗೂ ಎರಡು ಅಕ್ಷರಗಳು ಗುರುವಾಗಿದ್ದರೆ (ಆನಂತರದ ಎರಡು ಅಕ್ಷರಗಳು ಲಘು) ಅದನ್ನು **'ಮತ್ತೇಭ ವಿಕ್ರೀಡಿತ ವೃತ್ತ'** ಎನ್ನುವರು.

**5. ಲಘು ದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ** = ( ∪ ∪ —, — — ∪ )
ಮೊದಲ ಎರಡು ಅಕ್ಷರಗಳು ಲಘುವಾಗಿದ್ದು, ನಂತರದ ಮೂರು ಅಕ್ಷರಗಳು ಗುರುವಾಗಿದ್ದರೆ (ಆನಂತರದ ಅಕ್ಷರವು ಲಘು) ಅದನ್ನು **'ಮಹಾ ಸ್ರಗ್ಧರಾ ವೃತ್ತ'** ಎನ್ನುವರು.

**6. ಲಘುನಾಲ್ಕು ಚಂಪಕಮ್** = ( ∪ ∪ ∪, ∪ — ∪ )
ಮೊದಲ ನಾಲ್ಕು ಅಕ್ಷರಗಳು ಲಘುವಾಗಿದ್ದರೆ (ನಂತರದ ಅಕ್ಷರ ಗುರು) ಅದನ್ನು **'ಚಂಪಕಮಾಲಾ ವೃತ್ತ'** ಎನ್ನುವರು.

# 20. ಮತ್ತೇಭ ವಿಕ್ರೀಡಿತ ವೃತ್ತ.

- ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ

| ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|
| ∪∪ — | — ∪ ∪ | — ∪ — | ∪ ∪ ∪ | — — — | ∪ — — | ∪ — |
| ಎನಗಂ | ಪಾಂಡುಗ | ಮಿಲ್ಲಭೇ | ದಮಿಳೆ | ಯುಂಪಚ್ಚಾ | ಳ್ವಮಾಪಾಂ | ಡುನಂ |

- ಈ ಮೇಲಿನ ಪದ್ಯವು ಅಕ್ಷರ ಗಣದ 'ಮತ್ತೇಭ ವಿಕ್ರೀಡಿತ ವೃತ್ತ'ದಲ್ಲಿ ರಚಿತವಾಗಿದೆ.

# 20. ಚಂಪಕ ಮಾಲಾ ವೃತ್ತ

ಕುರುಕುಳನಂದನಂ ಪವನನಂದನನೆಂಬ ಮದಾಂಧ ಗಂಧಸಿಂ

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪ ∪ ∪ | ∪ — ∪ | — ∪ ∪ | ∪ — ∪ | ∪ — ∪ | ∪ — ∪ | — ∪ — |
| ಕುರುಕು | ಳನಂದ | ನಂಪವ | ನನಂದ | ನನೆಂಬ | ಮದಾಂಧ | ಗಂಧಸಿಂ |

ಈ ಮೇಲಿನ ಪದ್ಯವು ಅಕ್ಷರ ಗಣದ 'ಚಂಪಕ ಮಾಲಾ ವೃತ್ತ'ದಲ್ಲಿ ರಚಿತವಾಗಿದೆ.

# 20. ಉತ್ಪಲಮಾಲಾ ವೃತ್ತ

ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| — ∪ ∪ | — ∪ — | ∪ ∪ ∪ | — ∪ ∪ | — ∪ ∪ | — ∪ — | ∪ — |
| ಮೇದಿನಿ | ಯಂಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

- ಈ ಮೇಲಿನ ಪದ್ಯವು ಅಕ್ಷರ ಗಣದ 'ಉತ್ಪಲಮಾಲಾ ವೃತ್ತ'ದಲ್ಲಿ ರಚಿತವಾಗಿದೆ.

# 20. ಭಾಮಿನಿ ಷಟ್ಪದಿ.

| | | | | | | |
|---|---|---|---|---|---|---|
| 3<br>— ∪<br>ಏನು | 4<br>— —<br>ಹೇಳ್ಳೈ | 3<br>— ∪<br>ಕರ್ಣ | 4<br>— —<br>ಚಿತ್ತ | | | |
| 3<br>— ∪<br>ಗ್ಲಾನಿ | 4<br>— ∪ ∪<br>ಯಾವುದು | 3<br>∪ ∪ ∪<br>ಮನಕೆ | 4<br>— —<br>ಕುಂತೀ | | | |
| 3<br>— ∪<br>ಸೂನು | 4<br>∪ ∪∪ ∪<br>ಗಳಬೆಸೆ | 3<br>— ∪<br>ಕೃಸಿ | 4<br>— ∪∪<br>ಕೊಂಬುದು | 3<br>— ∪<br>ಸೇರ | 4<br>— ∪ ∪<br>ದೇನಿನ | ಗುರು<br>—<br>ಗೆ |

ಈ ಮೇಲಿನ ಪದ್ಯವು ಮಾತ್ರಾ ಗಣದ 'ಭಾಮಿನಿ ಷಟ್ಪದಿ'ಯಲ್ಲಿ ರಚಿತವಾಗಿದೆ.

# 20. ವಾರ್ಧಕ ಷಟ್ಪದಿ

| | | | |
|---|---|---|---|
| 5<br>— ∪ —<br>ಉರ್ವಿಯೊಳ್ | 5<br>— — ∪<br>ಕೌಸಲ್ಯೆ | 5<br>∪ ∪ ∪ ∪ ∪<br>ಪಡೆದಕುವ | 5<br>— ∪ —<br>ರಂ ರಾಮ |
| 5<br>— ∪ —<br>ನೊರ್ವನೇ | 5<br>— ∪ —<br>ವೀರನಾ | 5<br>∪ ∪ — ∪<br>ತನಯಜ್ಞ | 5<br>∪ ∪ ∪ ∪ ∪<br>ತುರಗಮಿದು |

| | | | | | | |
|---|---|---|---|---|---|---|
| 5<br>— ∪∪∪<br>ನಿರ್ವಹಿಸ | 5<br>— ∪ —<br>ಲಾರ್ಪರಾ | 5<br>— ∪ —<br>ರಾದೊಡಂ | 5<br>∪ ∪ ∪ —<br>ತಡೆಯಲೆಂ | 5<br>— ∪ —<br>ದಿರ್ದಲೇ | 5<br>∪ ∪ ∪ —<br>ಖನವನೋ | ಗು<br>—<br>ದಿ |

ಈ ಮೇಲಿನ ಪದ್ಯವು ಮಾತ್ರಾ ಗಣದ 'ವಾರ್ಧಕ ಷಟ್ಪದಿ'ಯಲ್ಲಿ ರಚಿತವಾಗಿದೆ

# 20. ಕಂದಪದ್ಯ

| | | |
|---|---|---|
| 4 | 4 | 4 |
| ∪ ∪ ∪ ∪ | ∪ ∪ — | ∪∪ — |
| ಅತಿಕುಟಿ | ಲಮನಂ | ಧನಲು |

| | | | | |
|---|---|---|---|---|
| 4 | 4 | 4 | 4 | 4 |
| ∪ ∪ — | — — | ∪ — ∪ | ∪ ∪ — | ∪ ∪ — |
| ಬ್ಧತೆಯಿಂ | ದಂ ದು | ಷ್ಟಬುದ್ಧಿ | ನುಡಿದಂ | ಮುಸಿಯಂ |

ಈ ಮೇಲಿನ ಪದ್ಯವು ಮಾತ್ರಾಗಣದ ಕಂದಪದ್ಯದಲ್ಲಿ ರಚಿತವಾಗಿದೆ.

# ಛಂದಸ್ಸು

- ______________________
- _____________________________________
- ಕಂದ ಪದ್ಯ
- _________________
- _________________
- ________________________________________
- ಭಾಮಿನಿ ಷಟ್ಪದಿ
- ____________________________________________
- ವೃತ್ತಪದ್ಯ

# ಗಾದೆಗಳ ವಿಸ್ತರಣೆ

- ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.
- ಗಾದೆಗಳು ಆಕಾರದಲ್ಲಿ ಚಿಕ್ಕದಾದರೂ ಅರ್ಥದಲ್ಲಿ ದೊಡ್ಡದು.
- 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಮಾತು ಗಾದೆಗಳ ಮಹತ್ತ್ವವನ್ನು ತಿಳಿಸುತ್ತದೆ.
- ಪ್ರಸ್ತುತ ಗಾದೆ ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ.

# ಮಾದರಿ ವ್ಯಾವಹಾರಿಕ ಪತ್ರ

- ಇಂದ,
- ____________________
- ____________________
- ಇವರಿಗೆ,
- ____________________
- ____________________
-
- ಮಾನ್ಯರೇ,
- ವಿಷಯ:– ____________________________________________
- ____________________________________________________
- ____________________________________________________
- ________________________________

ವಂದನೆಗಳೊಡನೆ

-
- ಸ್ಥಳ :
- ದಿನಾಂಕ :

ತಮ್ಮ ನಂಬುಗೆಯ
ಸಹಿ /–
(                    )

# ಮಾದರಿ ವ್ಯಾವಹಾರಿಕ ಪತ್ರ

# ರಾಷ್ಟ್ರಕವಿ ಡಾ. ಜಿ. ಎಸ್. ಶಿವರುದ್ರಪ್ಪ






ಹಣತೆ ಹಚ್ಚುತ್ತೇನೆ ನಾನು
ಈ ಕತ್ತಲೆಯನ್ನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ,
ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ.
ಇರುವಷ್ಟು ಹೊತ್ತು ನಿನ್ನ ಮುಖ ನಾನು,
ನನ್ನ ಮುಖ ನೀನು,
ನೋಡಬಹುದೆಂಬ ಒಂದೇ ಒಂದು ಆಸೆಯಿಂದ.
ಹಣತೆ ಆರಿದ ಮೇಲೆ,
ನೀನು ಯಾರೋ, ಮತ್ತೆ ನಾನು ಯಾರೋ.




¨B RAVEESH KUMAR - 9448958498

# ಶರಣು ಶರಣಾರ್ಥಿಗಳು





## ಬಿ. ಬಾಲಕೃಷ್ಣಯ್ಯ

ಕನ್ನಡ ಭಾಷಾ ಶಿಕ್ಷಕರು

ಸರ್ಕಾರಿ ಪ್ರೌಢಶಾಲೆ

ಬೋಗಾದಿ – 570026

ಮೈಸೂರು ತಾಲೂಕು ಮತ್ತು ಜಿಲ್ಲೆ

ಸಂಚಾರಿ ವಾಣಿ ಸಂಖ್ಯೆ – 99459 43115



# ಶರಣು ಶರಣಾರ್ಥಿಗಳು




## ಬಿ. ರವೀಶ್ ಕುಮಾರ್

ಕನ್ನಡ ಭಾಷಾ ಶಿಕ್ಷಕರು

ಸರ್ಕಾರಿ ಪ್ರೌಢಶಾಲೆ

ಕೇರ್ಗಳ್ಳಿ – 570026

ಮೈಸೂರು ತಾಲೂಕು ಮತ್ತು ಜಿಲ್ಲೆ

ಸಂಚಾರಿ ವಾಣಿ ಸಂಖ್ಯೆ – 94489 58498

**Email : ravee60@gmail.com**